# ಜೈಲಲ್ಲಾದರೂ ಹಾಕು, ಹಾಲಲ್ಲಾದರೂ ಹಾಕು



ಶ್ರೀಕೃಷ್ಣಜನ್ಮಾಷ್ಟಮಿ ಪ್ರಾಪ್ತಿರಸ್ತು... ತಮಾಷೆಗೆ ಕೆಲವೊಮ್ಮೆ ಹೀಗೆ ಹೇಳುವುದುಂಟು. ಆದರೆ ಇದು ನಿಜವೇ ಆಗುವುದಿದ್ದಲ್ಲಿ ನಾರ್ವೆಯಲ್ಲೇ ಆಗಲಿ ಅನ್ನೋ ಜನ ಕೂಡ ಇದ್ದಾರೆನೋ.

ಈ ದೇಶದಲ್ಲಿ ಜೈಲೆಂದರೆ ಜೈಲಲ್ಲ. ಅದು ವೈಭವೋಪೇತ ಬಂಗಲೆ, ತ್ರಿಸ್ಟಾರ್ ರೀತಿಯ ಹೊಟೇಲ್ ಎಂದರೆ ತಪ್ಪಾಗಲ್ಲವೇನೋ.

ಹೋಗ್ಲಿ ಬಿಡಿ, ಜೈಲಿನ ಬಗ್ಗೆ ಈಗ ಯಾಕೆ ಮಾತು... ಅದಕ್ಕಿಂತ ಅಲ್ಲಿ ಅಪರಾಧಗಳಿಗೆ ಯಾವ ರೀತಿ ಶಿಕ್ಷೆ ನೀಡುತ್ತಾರೆ ಎಂಬುದನ್ನು ನೋಡೋಣ.

ಅಲ್ಲಿ ಅದೆಂತಹುದೇ ಕ್ರೂರವಾದ ಅಪರಾಧವೆಸಗಲಿ, ನೀಡಲಿಕ್ಕಿರುವ ಗರಿಷ್ಠ ಪ್ರಮಾಣದ ಶಿಕ್ಷೆ ಎಂದರೆ ಕೇವಲ 21 ವರ್ಷ ಮಾತ್ರ. ಅಲ್ಲಿ ಅಜೀವ ಪರ್ಯಂತ ಜೀವಾವಧಿ ಶಿಕ್ಷೆಯಾಗಲಿ, ಸಾಯುವವರೆಗೂ ಜೈಲಿನಲ್ಲೇ ಇರಬೇಕು ಅನ್ನೋ ಶಿಕ್ಷೆಯಾಗಲಿ ಅಥವಾ ಮರಣದಂಡನೆಯಂಥ ಶಿಕ್ಷೆಗಳು ಇಲ್ಲವೇ ಇಲ್ಲ.



ಅತ್ಯಂತ ಕ್ರೂರವಾಗಿ ಅಪರಾಧ ಮಾಡಿದವನಿಗೆ ಹೆಚ್ಚೆಂದರೆ 21 ವರ್ಷ ಶಿಕ್ಷೆ ನೀಡುತ್ತಾರೆ. ಇದನ್ನು ಅಲ್ಲಿನ ನ್ಯಾಯಾಂಗ ವ್ಯವಸ್ಥೆಯೇ ಇಂಥದೊಂದು ನಿಯಮ ರೂಪಿಸಿದೆ.

**ಬದಲಾವಣೆ ಬಗ್ಗೆ ಬಲು ನಂಬಿಕೆ**

ನಾರ್ವೆ ಜನರಿಗೆ ಬದಲಾವಣೆ ಮೇಲೆ ಬಲು ನಂಬಿಕೆ. ಹಾಗಾಗೇ ಅವರಿಗೆ ಜೈಲು ಶಿಕ್ಷೆಗಳಲ್ಲಿ ನಾಲ್ಕು ಕೋಣೆಗಳ ಒಳಗೆ ಜನರನ್ನು ಬಿಡುವುದರಲ್ಲಿ ಅರ್ಥವಿಲ್ಲ ಎಂಬ ಅರ್ಥದಲ್ಲಿ ಮಾತನಾಡುತ್ತಾರೆ. ಹೀಗಾಗಿ ಕೆಲವು ಕೊಲೆಗಡುಕರು ಕೇವಲ 14 ವರ್ಷಗಳ ಕಾಲ ಮಾತ್ರ ಜೈಲು ಶಿಕ್ಷೆ ಅನುಭವಿಸುತ್ತಾರೆ. ಇದರಲ್ಲೂ ಕೆಲವರಿಗೆ ಅವರ ಶಿಕ್ಷೆ ಅವಧಿಯ ಮೂರನೇ ಎರಡರಷ್ಟು ಭಾಗ ಮುಗಿದ ಮೇಲೆ ಜೈಲಿನಂದ ಬಿಡುಗಡೆ ಮಾಡಲಾಗುತ್ತದೆಯಂತೆ. ಇದಿಷ್ಟೇ ಅಲ್ಲ ಇನ್ನೂ ಕೆಲವರಿಗೆ ಅವರ ಶಿಕ್ಷೆಯ ಮೂರನೇ ಒಂದು ಭಾಗದಷ್ಟು ಶಿಕ್ಷೆ ಅನುಭವಿಸಿಯಾದ ಮೇಲೆ ಶನಿವಾರ ಮತ್ತು ಭಾನುವಾರಗಳಲ್ಲಿ ಹೊರಗೆ ಸುತ್ತಾಡಿ ಬರಲು ಕಳುಹಿಸುತ್ತಾರೆ. ಅದೂ ಯಾರ ಕಾವಲಿಲ್ಲದೇ...!

ಇಲ್ಲಿನ ವೈಚಿತ್ರ್ಯಕ್ಕೆ ಒಂದು ಉದಾಹರಣೆಯಿದೆ.

'ನಾರ್ವೆಯ ಶಾಲೆಯೊಂದರ ಇಬ್ಬರು ವಿದ್ಯಾರ್ಥಿಗಳು, 5 ವರ್ಷದ ಬಾಲಕಿಯೊಬ್ಬಳನ್ನು ಬರ್ಬರವಾಗಿ ಹತ್ಯೆ ಮಾಡಿದ್ದರು. ಆದರೆ ಇವರಿಬ್ಬರನ್ನು ಕೇವಲ 2 ವಾರದಲ್ಲೇ ಜೈಲಿನಿಂದ ಬಿಡುಗಡೆ ಮಾಡಲಾಯ್ತು. ಈಗ ಇವರಿಬ್ಬರು ಖುಷಿಯಿಂದಲೇ ಶಾಲೆಗೆ ಹೋಗುತ್ತಿದ್ದಾರೆ'.







ಆದರೆ ಈ ವಿದ್ಯಾರ್ಥಿಗಳನ್ನು ಹಾಗೆಯೇ ಮನೆಗೆ ಕಳುಹಿಸಿಲ್ಲ. ನಾರ್ವೆ ವ್ಯವಸ್ಥೆ ಪ್ರಕಾರ ಇವರಿಗೆ ಕೌನ್ಸೆಲಿಂಗ್ ನಡೆಸಲಾಗಿದೆ. ಅಲ್ಲದೆ ಕೆಲವೊಂದು ಥೆರಪಿಗಳ ಮೂಲಕ ಉತ್ತಮ ಜೀವನ ಹೇಗೆ ನಡೆಸುವುದು ಕಲಿಸಿಕೊಡುತ್ತಾರೆ.

**ಲಕ್ಷ ಮಂದಿಗೆ 66 ಮಂದಿಯಷ್ಟೇ ಜೈಲಿನಲ್ಲಿ...**

ಇಲ್ಲಿನ ಅಪರಾಧ ಪ್ರಮಾಣವೂ ಕಡಿಮೆ. ಪ್ರತಿ ಒಂದು ಲಕ್ಷ ಮಂದಿಗೆ ಕೇವಲ 66 ಮಂದಿಯಷ್ಟೇ ಸರಳುಗಳ ಹಿಂದೆ ಇದ್ದಾರೆ. ಇದು ಯುರೋಪ್‌ಗೆ ಹೋಲಿಕೆ ಮಾಡಿದರೆ ಕಡಿಮೆ.

ಇನ್ನೂ ವಿಚಿತ್ರವಿದೆ. ಇಲ್ಲಿ ಯಾವುದಾದರೂ ಅಪರಾಧ ಮಾಡಿ ಪೊಲೀಸರ ಕೈಗೆ ಸಿಕ್ಕಿ ಬಿದ್ದರೆ ಜೈಲಿಗೆ ಹೋಗಲು ಇನ್ನೊಬ್ಬ ಬಿಡುಗಡೆಯಾಗುವವರೆಗೆ ಕಾಯಬೇಕು. ಕಾರಣ, ಜಾಗದ ಸಮಸ್ಯೆ. ಕೆಲವೊಮ್ಮೆ ಒಂದು ವಾರ, ಇನ್ನೂ ಕೆಲವೊಮ್ಮೆ ತಿಂಗಳುಗಳ ಕಾಲ ಜೈಲಿಗೆ ಹೋಗಲು ಕಾಯಬೇಕು! ಈ ಸಮಯದಲ್ಲಿ ಅವರು ಆರಾಮಾಗಿ ಅವರ ಮನೆಯಲ್ಲೇ ಇರಬಹುದು. ಇದು ಇನ್ನೂ ಅಚ್ಚರಿ ಅಲ್ಲವೇ.

**ಜೈಲುಗಳೂ ಸ್ವರ್ಗ...**

ನಾರ್ವೆಯಲ್ಲಿ ಜೈಲು ಶಿಕ್ಷೆಯಷ್ಟೇ ಕಡಿಮೆಯಲ್ಲ. ಅಲ್ಲಿ ಜೈಲುಗಳೂ ಕೂಡ ಯಾವ ಲಕ್ಸುರಿ ಹೊಟೇಲ್‌ಗಳಿಗಿಂತ ಕಡಿಮೆ ಇಲ್ಲ. ಒಳ್ಳೆ ಎಸಿ ಹೊಟೇಲ್‌ನ ಸಿಂಗಲ್ ರೂಂನಂತೆ ಕಾಣುವ ಇಲ್ಲಿ ಎಲ್ಲವೂ ಇದೆ. ಅಟ್ಯಾಚ್ಡ್ ಬಾಥ್‌ರೂಂ, ಲೈಬ್ರರಿ, ಟೀವಿ, ಸ್ಪೋರ್ಟ್ಸ್‌ಗೆ ಮೈದಾನ... ಹೀಗೆ ಎಲ್ಲಾ ಸೌಲಭ್ಯಗಳೂ ಇವೆ. ನಮ್ಮ ದೇಶದಲ್ಲಿ ಎಷ್ಟೋ ಹೊಟೇಲ್‌ಗಳೂ ಕೂಡ ಇಷ್ಟು ಚೆನ್ನಾಗಿರುವುದಿಲ್ಲ. ಜೈಲುಗಳು ಇಷ್ಟು ಚೆನ್ನಾಗಿರುವುದಕ್ಕೋ ಏನೋ ಅಲ್ಲಿನ ಪೊಲೀಸರು ಕೂಡ ಅಪರಾಧಿಗಳನ್ನು ಜೈಲಿಗೆ ಹಾಕಲಿಕ್ಕೆ ಹಿಂದೆ ಮುಂದೆ ನೋಡುತ್ತಾರೆ.

**ನಾರ್ವೆ ನರಮೇಧ ಪಾಪಿಗೂ 21 ವರ್ಷ ಶಿಕ್ಷೆ**

ನಾರ್ವೆ ಬಗ್ಗೆ ಇಷ್ಟೆಲ್ಲಾ ಹೇಳಲಿಕ್ಕೆ ಕಾರಣ ಇತ್ತೀಚೆಗಷ್ಟೇ ನಾರ್ವೆ ರಾಜಧಾನಿ ಓಸ್ಲೋದಲ್ಲಿ ನರಮೇಧ ನಡೆಸಿದ ಆಂದೇರ್ ಬೆಹ್ರಿಂಗ್ ಬ್ರೇವಿಕ್‌ಗೆ 85 ಮಂದಿ ಹತ್ಯೆ ಮಾಡಿದ್ದಕ್ಕಾಗಿ ಕೇವಲ 21 ವರ್ಷ ಶಿಕ್ಷೆಯಾಗುತ್ತಂತೆ. ಕಾರಣ ಅಲ್ಲಿನ ನ್ಯಾಯಾಂಗ ವ್ಯವಸ್ಥೆಯೇ. ಹೆಚ್ಚು ಶಿಕ್ಷೆ ಕೊಡುವ ಪದ್ಧತಿ ರೂಡಿಸಿಕೊಳ್ಳದ ನಾರ್ವೆ ನರಮೇಧ ನಡೆಸಿದವನಿಗೂ ಇಷ್ಟು ಕಡಿಮೆ ಶಿಕ್ಷೆ ಕೊಡಬೇಕು. ಹೋಗ್ಲಿ ಬಿಡಿ, ಬೇರೆ ದೇಶಗಳಲ್ಲಾಗಿದ್ದರೆ ಈತನಿಗೆ ಮರಣ ದಂಡನೆಯೇ ಕಾದಿತ್ತೇನೋ.

• ಸೋಮಶೇಖರ ಸಿ.ಜೆ.



# ಸೂರ್ಯ ನಮಸ್ಕಾರ

## ಹಂದೆಯ ಬಾಳಿನ ಬೆಳಕಾಗಿ



1ನೇ ಪುಟದಿಂದ

ರಾತ್ರಿಯೂ ಅಡುಗೆ ಮಾಡ್ತಾಳೆ, ಸಣ್ಣಪುಟ್ಟ ಕೆಲಸಗಳಿಗೂ ರಾತ್ರಿಯ ಟೈಮೇ ಮೀಸಲಾಗಿದೆ, ಮನೆಯಿಂದ ತುಸು ದೂರದಲ್ಲಿರುವ ಬಾವಿಯಿಂದ ನೀರನ್ನೂ ಸೇದಿ ತರ್‍ತಾಳೆ, ಕತ್ತಲಲ್ಲೂ ಹೊರಗೇನೋ ಕಾಣಿಸುವಷ್ಟು ದೃಷ್ಟಿ ಪವರ್‌ಫುಲ್ ಆಗಿದೆ ಅಂದ್ರೆ ಅದಕ್ಯಾರೋ 'ಐ' ಸ್ಪೆಷಲಿಸ್ಟ್ ಕಾರಣರಲ್ಲ; ಕೇವಲ ಸೆಲ್ಕೋ ಕಂಪನಿ!

ಮ್ಯಾಗ್ಸಸೆ ಮುಕುಟ ಏರಿಸಿಕೊಂಡ ಕುಂದಾಪುರದ ಕನ್ನಡಿಗ ಹರೀಶ್ ಹಂದೆಯ ಸಾಧನೆಯ ಪುಟದ ಎರಡು ಸಾಲುಗಳನ್ನು ಹೀಗೆ ನಿರೂಪಿಸಬಹುದು. ಮೇಲಿನ ಘಟನೆ ನಡೆದಿದ್ದು ಗುಜರಾತ್ ರಾಜ್ಯದ ಭುರುಚ್‌ನ ನಾಡಾದಲ್ಲಿ. ನಾಡಾ ಒಂದೇ ಅಲ್ಲ, ಕೇರಳ, ಮಹಾರಾಷ್ಟ್ರದ ಗಡಿಭಾಗ ಸೇರಿದಂತೆ ಕರ್ನಾಟಕದ ಮೂಲೆ ಮೂಲೆಗೆ ಹೋದರೆ ಹಂದೆಯ ಹಿಂದಿನ ಪ್ರಭೆಗೆ ಎಣೆಯೇ ಇಲ್ಲವೇನೋ ಅನ್ನಿಸುತ್ತದೆ. ಸೂರ್ಯ ಇಣುಕುವುದೇ ಅಪರೂಪವಾದ ಕಾಡಿನ ಮನೆಗಳಲ್ಲೂ ಮನೆಯೊಳಗೇ ಸೂರ್ಯನನ್ನು ಸೃಷ್ಟಿಸಿದರೆಂದರೆ ಒಮ್ಮೆ ಯೋಚಿಸಿ. ಹುಟ್ಟಿನಿಂದ ಬಲ್ಬುಗಳನ್ನೇ ಕಾಣದ ಮಂದಿಯ ಸೂರುಗಳನ್ನು ಸೋಲಾರ್ ದೀಪದಿಂದ ಬೆಳಗಿಸಿದ್ದು ಸಾಮಾನ್ಯ ಕಾರ್ಯವೇನಲ್ಲ. ಆದರೆ, ಈ ಸಾಧನೆ ನಮಗೆ ಕಾಣಿಸಲಿಲ್ಲ; ಮ್ಯಾಗ್ಸಸೆ ಫೌಂಡೇಷನ್‌ಗೆ ಕಾಣಿಸಿತು!

ತುಣುಕು ಬೆಳಕಿನ ಯೋಜನೆಗಳು ಎಲ್ಲಾ ರಾಜ್ಯಗಳಲ್ಲೂ ಇದ್ದಿದ್ದೇ. ಮೂರು ಕೋಣೆಗೆ ಒಂದೇ ಬಲ್ಬೆನ್ನುವುದು ಯಾವ ನ್ಯಾಯ? ಅದೂ ಒಂದು ಶೆಲ್ಲಿನ ಬ್ಯಾಟರಿಗಿಂತ ಡಿಮ್ಮು. ಹಂದೆ ಇದನ್ನೆಲ್ಲಾ ಯೋಚಿಸಿ, ಒಂದೇ ಬಲ್ಬಿನಲ್ಲೇ ಆ ಮೂರು ಕೋಣೆಗಳನ್ನೂ ಬೆಳಗಿಸಿ ಯಶಸ್ಸು ಕಂಡರು. ವೆಚ್ಚದಾಯಕ ಶಕ್ತಿಮೂಲಗಳೆಲ್ಲ ಬರೀ ಶ್ರೀಮಂತರಿಗೆ, ಬಡವರ ಮನೆ ಬೆಳಗುವುದು ಸೌರಶಕ್ತಿಯೊಂದೇ ಎಂಬ ಪಾಲಿಸಿಯಲ್ಲಿ ದೇಶದ ಲಕ್ಷಾಂತರ ಮನೆ-ಮನಗಳನ್ನು ಬೆಳಗಿಸಿದರು.

**ಮಿನುಗಿದ ಮೇದಿನಿ**

ಕುಮಟಾದಿಂದ 35 ಮೈಲಿ ದೂರದಲ್ಲಿ ಮೇದಿನಿ ಎಂಬ ಕುಗ್ರಾಮವೊಂದಿದೆ. ಕನಿಷ್ಠ ಉಪ್ಪು ಕೊಳ್ಳಲು ಬರಬೇಕೆಂದರೆ ಅವರು ಐದಾರು ಮೈಲಿ ಪಾದ ಸವೆಸಬೇಕು. ವಾಹನಗಳ ಚಕ್ರವಂತೂ ಜಪ್ಪಯ್ಯ ಅಂದ್ರೂ ಆ ಮಾರ್ಗದ ಮೈಮೇಲೆ ಹರಿಯದು. ರಾತ್ರಿ ಎಂಟಾಯ್ತು ಎಂದರೆ ಕೆಲವು ವರ್ಷದ ಹಿಂದೆ ಆ ಮನೆಗಳಲ್ಲಿ ಅಪರಾತ್ರಿ. ಓದುವ ಮಕ್ಕಳಿಗೂ ಇರುಳೆಂಬುದು ಶತ್ರು. ಯಾವಾಗ ಸೆಲ್ಕೋ ಕಣ್ಣು ಅಲ್ಲಿಗೂ ಬಿತ್ತೋ, ಆಗ 'ಸೂರ್ಯನೂ ಮುಳುಗುವುದು ತಡ' ಎಂದು ಅವರಿಗನ್ನಿಸಿದೆ. ಚಿಮಣಿ ಎದುರು ನಡೆದ ಬಲ್ಬುಗಳ ಚಮತ್ಕಾರ ಅವರ ಜೀವನದಲ್ಲೂ ಸಾಕ್ಷಾತ್ಕಾರಕ್ಕೆ ಕಾರಣವಾಗಿದೆ.

**ಬ್ಯಾಂಕುಗಳಿಗೆ ಥ್ಯಾಂಕ್ಸ್**

ಸೂರ್ಯ ಮುಳುಗಿದನೆಂದರೆ ದಿನವೇ ಮುಗಿಯಿತೆನ್ನುತ್ತಿದ್ದವರೂ ಹರೀಶ್ ಹಂದೆಯವರನ್ನು ನೆನೆಸಿಕೊಳ್ಳುತ್ತಿದ್ದಾರೆ. ಕೈಯಲ್ಲಿ ದುಡ್ಡಿಲ್ಲದಿದ್ದರೇನಂತೆ? ಗ್ರಾಮೀಣ ಬ್ಯಾಂಕುಗಳಲ್ಲಿ ಕಡಿಮೆ ಬಡ್ಡಿದರದಲ್ಲಿ ಸಾಲ ಕೊಡಿಸಿ ಮನೆ ಬೆಳಗುವ ಕೆಲಸವನ್ನು ಹರೀಶ್ ನಿಲ್ಲಿಸಲಿಲ್ಲ. ಈ ವಿಚಾರದಲ್ಲಿ ಕರ್ನಾಟಕವನ್ನು ಗುಣಗಾನ ಮಾಡುವ ಅವರು, 'ಕರ್ನಾಟಕ ವಿಕಾಸ, ಪ್ರಗತಿಯಂಥ ಗ್ರಾಮೀಣ ಬ್ಯಾಂಕುಗಳ ನೆರವಿಲ್ಲದೆ ಸೆಲ್ಕೋ ಇಷ್ಟು ಹೆಸರು ಮಾಡಲು ಸಾಧ್ಯವೇ ಇರುತ್ತಿರಲಿಲ್ಲ. ಮೊದಲು ಅವರಿಗೆ ಥ್ಯಾಂಕ್ಸ್. ಕರ್ನಾಟಕದಲ್ಲಿ ನಮ್ಮ ಶ್ರಮವನ್ನು ಅವರು ಸಲೀಸಾಗಿ ಅರ್ಥಮಾಡಿಕೊಂಡರು. ಆದರೆ, ಬೇರೆ ರಾಜ್ಯಗಳಲ್ಲಿ ಗ್ರಾಮೀಣ ಬ್ಯಾಂಕುಗಳು ಮುಂದೆ ಬರುತ್ತಲೇ ಇಲ್ಲ. ಅದೊಂದು ಸಮಸ್ಯೆಯಿದೆ' ಎಂಬ ವಿಷಾದವನ್ನೂ ಹೊರಹಾಕಿದರು.

ಮನೆ ಕಟ್ಟಲು, ಕಾರು- ಆಭರಣ ಕೊಳ್ಳಲು ದೀರ್ಘ ವರ್ಷದ ಸಾಲದ ಯೋಜನೆಗಳಿವೆ. ಆದರೆ, ಬಡವರ ಮನೆಗೆ ಸೌರವಿದ್ಯುತ್ ಅಳವಡಿಸಿಕೊಳ್ಳಲು ಕೊಡುವ ಲೋನ್ ಅನ್ನು ಒಂದೆರಡು ವರ್ಷದಲ್ಲಿ ತೀರಿಸಬೇಕೆಂದರೆ ಹೇಗೆ? ಎಂಬ ಪ್ರಶ್ನೆಯೂ ಅವರಲ್ಲಿದೆ.

ಖರಗ್ಪುರದಲ್ಲಿ ಎಂಜಿನಿಯರಿಂಗ್ ಮುಗಿಸಿದ ಹಂದೆ, ಮುಂದೆ ಪಿಎಚ್‌ಡಿಗೆ 'ಸೌರವಿದ್ಯುತ್' ವಿಷಯವನ್ನೇ ಆರಿಸಿಕೊಂಡರು. ಅಲ್ಲದೇ, ಒರಿಸ್ಸಾ- ಶ್ರೀಲಂಕಾದ ಬುಡಕಟ್ಟು ಪ್ರದೇಶಗಳಲ್ಲಿ ಅಧ್ಯಯನ ನಡೆಸಿ ಬೆಳಕೇ ಇಲ್ಲದ ಬದುಕು ಹೇಗಿರುತ್ತದೆ ಎಂದು ತಿಳಿಯಲು ಎರಡು ವರ್ಷ ಅಲ್ಲೇ ಇದ್ದರು. ಜತೆಯಲ್ಲಿ ಎಂಜಿನಿಯರಿಂಗ್ ಮುಗಿಸಿದ ಸ್ನೇಹಿತರೆಲ್ಲ ಹೈ ಫೈ ಕೆಲಸ ಹಿಡಿದು ಎಸಿ ಕಾರು ಹತ್ತಿದರೆ, ಹಂದೆ ಅವರ ಕಾಲುಗಳು ಗುಡ್ಡಗಾಡನ್ನು ಹತ್ತಿದ್ದವು.

**ಇದೆಂಥ ದುಃಸ್ಥಿತಿ!**

ಬಹುಶಃ ಅದು 1993ರ ಕಾಲವಿರಬಹುದು. ಪುತ್ತೂರಿನ ರೈಯಮ್ಮ ಎಂಬ 65 ವರ್ಷದ ವೃದ್ಧೆ ಕಣ್ಣೀರಿಟ್ಟು ಹೇಳಿದರು, 'ನನ್ನದು ಒಂದೇ ಆಸೆ. ಸಾಯೋದ್ರೊಳಗೆ ಮನೆಯಲ್ಲಿ ಬೆಳಕು ಕಾಣ್ಬೇಕು' ಅಂತ. ಜಗತ್ತಿನ ಮೂಲೆ ಮೂಲೆಗೆ ಹೋದರೂ ಪುತ್ತೂರಿನ ಆ ಅಜ್ಜಿಯ ಮಾತು ಹಂದೆಯವರ ಮನವನ್ನು ಕೊರೆಯುತ್ತಿತ್ತಂತೆ.

**ಇವಳು ಯಾರ್ ಗೊತ್ತಾ?**

ಧಾರವಾಡದ ಹಳ್ಳಿಯೊಂದಕ್ಕೆ ಸೋಲಾರ್ ವಿದ್ಯುತ್ ಹಾಕಿದ ಹಂದೆ ತಂಡ, ಮರಳಿ 9 ವರ್ಷ ಬಿಟ್ಟು ಅಲ್ಲಿಗೆ ಹೋಗಿತ್ತು. ಆಗ ಅಲ್ಲೊಬ್ಬಳು ಪುಟ್ಟ ಹುಡುಗಿ ಹಂದೆಯವರಿಗೆ ಕಾಫಿ ತಂದು ಕೊಟ್ಟಳು. ಆ ಹುಡುಗಿಯ ತಂದೆ, 'ಇವಳು ಯಾರು ಗೊತ್ತಾ?' ಎಂದಾಗ ಹಂದೆಯವರ ಉತ್ತರ ನಿರೀಕ್ಷೆಯಂತೆ 'ಇಲ್ಲ' ಎಂಬುದೇ ಆಗಿತ್ತು. ಆಗ ತಂದೆಯೇ ಹೇಳಿದರು, '9 ವರ್ಷದ ಹಿಂದೆ ನೀವು ಮನೆಯಲ್ಲಿ ಬಲ್ಬ್ ಹಾಕಿದ ದಿನದಂದೇ ಇವಳೂ ಹುಟ್ಟಿದಳು!' ಅಂದಾಗ ಹಂದೆಯವರ ಮುಖ ಹೆಮ್ಮೆಯಿಂದ ಅರಳಿತ್ತು.

**ಪ್ರಶಸ್ತಿ ಹಣ ಸಮಾಜಕ್ಕೆ**

ಮ್ಯಾಗ್ಸಸೆಯಿಂದ 50 ಸಾವಿರ ಡಾಲರ್ ಹಣದ ಮೇಲೂ ಹಂದೆಯವರಿಗೆ ಮೋಹವಿಲ್ಲ. ಗ್ರಾಮೀಣರ ಬದುಕನ್ನು ಬೆಳಗಲು ಅದನ್ನು ಸಂಪೂರ್ಣವಾಗಿ ಬಳಸುತ್ತೇನೆ ಅಂತಾರೆ. ಆಫ್ರಿಕದಂಥ ಬಡ ರಾಷ್ಟ್ರಗಳಿಂದಲೂ ಆಫರ್ ಬಂದರೆ, ಅದಕ್ಕೂ ಸೆಲ್ಕೋ ರೆಡಿ ಇದೆಯಂತೆ. ಆದರೆ, ಅಲ್ಲಿಗೆ ಇವರ ತಂಡ ಹೋಗುವುದಿಲ್ಲ. ಬದಲಾಗಿ, ಅಲ್ಲಿಯವರನ್ನೇ ಇಲ್ಲಿಗೆ ಕರೆತಂದು ಉಜಿರೆಯಲ್ಲಿರುವ ಲ್ಯಾಬಿನಲ್ಲಿ ತಾಂತ್ರಿಕ ತರಬೇತಿ ನೀಡಿ, ಫೈನಾನ್ಸ್‌ಗೆ ಸಂಬಂಧಿಸಿದ ಐಡಿಯಾಗಳನ್ನು ಕೊಟ್ಟು, ಸ್ವದೇಶಗಳಲ್ಲಿ ಅಳವಡಿಸಿಕೊಳ್ಳಲು ಮಾರ್ಗದರ್ಶನ ನೀಡುತ್ತೇನೆ ಅಂತಾರೆ ಹಂದೆ.

ಈ ಕಿರಿಯ ಪ್ರಾಯದಲ್ಲೇ 1,20,000 ಮನೆಗಳಿಗೆ ಬೆಳಕು ನೀಡಿದ ಹಂದೆಗೆ ಜಗತ್ತು ಬೆಳಗುವುದು ಅಸಾಧ್ಯದ ಮಾತಲ್ಲ. ■



## ದೂರದೃಷ್ಟಿಯ ಹಂದೆ



ಕುಂದಾಪುರ ತಾಲೂಕಿನ ಹಂದಟ್ಟು ಗ್ರಾಮದಲ್ಲಿ ಜನಿಸಿದ ಹರೀಶ್ ಹಂದೆ, ಐಐಟಿ ಖರಗ್ಪುರದಲ್ಲಿ ಎಂಜಿನಿಯರಿಂಗ್ ಪದವಿ ಪಡೆದರು. ಸ್ನಾತಕೋತ್ತರ ಪದವಿ ಅಮೆರಿಕದ ಮೆಸಾಚುಸೆಟ್ಸ್ ವಿವಿಯಲ್ಲಾಯಿತು. ಸೌರಶಕ್ತಿ ವಿದ್ಯುತ್ ಯೋಜನೆ ಸಂಶೋಧನೆಗಾಗಿ ಜಗತ್ತಿನ ಹಲವು ದೇಶಗಳಿಗೆ ಭೇಟಿ ಕೊಟ್ಟರು. ಇದರ ಪರಿಣಾಮವೇ ಅವರು ಸಂಸ್ಥಾಪಿಸಿದ ಸೆಲ್ಕೋ ಸೋಲಾರ್ ಕಂಪನಿ. ಇದು ಹುಟ್ಟಿದ್ದು 1995ರಲ್ಲಿ, ಅದೂ ಒಂದು ಸಾಮಾಜಿಕ ಸಂಸ್ಥೆಯಾಗಿ.



ಮೊದಲು ಹಂದೆಯವರೇ ಸ್ವತಃ 1000 ಮನೆಗಳಿಗೆ ಸೌರ ವಿದ್ಯುತ್ ಘಟಕಗಳನ್ನು ಅಳವಡಿಸಿದರು. ಅಲ್ಲಿಂದ ಈ ಮಹತ್ತರ ಆಂದೋಲನ ಶುರುವಾಯಿತು. ಈಗ ರಾಜ್ಯಾದ್ಯಂತ 25 ಶಾಖೆಗಳನ್ನು ಹಾಗೂ 176 ಉದ್ಯೋಗಿಗಳನ್ನು ಹೊಂದಿದೆ. ಗುಜರಾತ್, ಕೇರಳ, ಮಹಾರಾಷ್ಟ್ರದಲ್ಲೂ ಸಂಸ್ಥೆ ಸಕ್ರಿಯ. ಈ ಸಂಸ್ಥೆಯ ಉತ್ಪನ್ನಗಳಿಗೆ ಹಣಕಾಸು ನೆರವು ಒದಗಿಸುವಲ್ಲಿ 20ಕ್ಕೂ ಅಧಿಕ ಸಂಸ್ಥೆಗಳು ಒಡಂಬಡಿಕೆ ಹೂಡಿವೆ.

ಕೇವಲ ವಿಶಿಷ್ಟ ತಾಂತ್ರಿಕತೆ, ಸೋಲಾರ್ ಉಪಕರಣಗಳನ್ನು ಮಾರಾಟ ಮಾಡುವ ಸಂಸ್ಥೆಯಾಗದೇ, ಪ್ರತಿಯೊಬ್ಬ ಗ್ರಾಹಕರ ಅಗತ್ಯಕ್ಕನುಗುಣವಾಗಿ ಉತ್ಪನ್ನಗಳನ್ನು ಹೊಂದುವುದಾಗಿದೆ. ಗ್ರಾಮೀಣ ಪ್ರದೇಶದ ಬಡವರೂ ತಾಂತ್ರಿಕತೆ ಹೊಂದಬಲ್ಲರು, ಅವರೂ ಅದನ್ನು ನಿರ್ವಹಿಸಬಲ್ಲರು ಎಂಬುದನ್ನು ಸಾಬೀತು ಮಾಡುವುದೇ ಸಂಸ್ಥೆಯ ಧ್ಯೇಯ. ಮುಖ್ಯ ಧ್ಯೇಯಗಳನ್ನು ಸಾಕಾರಗೊಳಿಸುವಲ್ಲಿ ಪ್ರಾದೇಶಿಕ ಘಟಕಗಳ ಮೂಲಕ ಸಿಸ್ಟಂ ಅಳವಡಿಸುವಿಕೆ ಹಾಗೂ ಸದಾ ನಿರ್ವಹಣೆ, ಸೇವಾ ವಿಧಾನಗಳನ್ನೂ ಸಂಸ್ಥೆ ರೂಪಿಸಿದೆ. ■

# ಹುಬ್ಬಳ್ಳಿಯಾಂವಾ

## ಒಂದು ಚಿಂತನ

• ವಾಮನ ಬೇಂದ್ರೆ

26-6-2011ರ 'ಸಾಪ್ತಾಹಿಕ ಪ್ರಭ' ವಿಭಾಗದ ಪ್ರಾರಂಭದ ಪುಟದ ಮೇಲೆ ಬೇಂದ್ರೆ ಭಾವಚಿತ್ರ, 'ಹುಬ್ಬಳ್ಳಿಯಾಂವಾ' ಕವನದ ಪಲ್ಲವಿ ಹಾಗೂ ಆರು ನುಡಿಯ ಸಂಪೂರ್ಣ ಕವನ ಕಂಡೆ. 'ಕಾಡುವ ಕವಿತೆ- ಇದೊಂದು ತತ್ವಪದವೆ?' ಎಂಬ ಪ್ರಶ್ನೆ ಓದಿದೆ. 'ಗಿರಡ್ಡಿಯವರ ಪ್ರಕಾರ ಇದು ತತ್ವಪದ. ಅದನ್ನು ಪ್ರಶ್ನಿಸುವ ನಾಡಿಗರ ನಾಡಿಮಿಡಿತ' ಎಂಬ ಸಂಪಾದಕರ ನುಡಿಯಿಂದ ನಾನೂ ಸ್ಪಂದಿಸಬೇಕು ಎಂದು ಓದತೊಡಗಿದೆ.

'ಓದುಂಬರಗಾಥೆ' ದ.ರಾ. ಬೇಂದ್ರೆಯವರ ಜೀವನ ಮಹಾಕಾವ್ಯದ 4ನೇ- ವಿನ್ಯಾಸ ಸಂಪುಟದಲ್ಲಿಯ 889ನೇ ಕವನ 'ಹುಬ್ಬಳ್ಳಿಯಾಂವಾ' 17-2-2003- ಬೇಂದ್ರೆಯವರ 108ನೇ ಜನ್ಮದಿನದ ನಿಮಿತ್ತವಾಗಿ, ಹುಬ್ಬಳ್ಳಿಯ- ಡಾ.ದ.ರಾ. ಬೇಂದ್ರೆ ಸಂಶೋಧನಾ ಸಂಸ್ಥೆಯಿಂದ ಬೆಳಕು ಕಂಡದ್ದು. ಹೀಗಿದ್ದರೂ ಈ ಕವನ, ಬೇಂದ್ರೆಯವರ, 1937ರಲ್ಲೇ ಪ್ರಕಟಗೊಂಡ 'ಸಖೀಗೀತ'ದೊಳಗಿನದು. ಈ ಕವನ ಬೇಂದ್ರೆಯವರಿಗೆ ಹುಟ್ಟಿದ್ದು- ಹೆರಿಗೆಯಾದದ್ದು 1935ರಲ್ಲಿ. ಆಗ ಬೇಂದ್ರೆಯವರು ಪುಣೆಯಲ್ಲಿ 17 ವರ್ಷದ ಅನಂತರದಲ್ಲಿ ಎಂ.ಎ. ವಿದ್ಯಾಭ್ಯಾಸವನ್ನು ಮುಗಿಸುವ ಹಂತದಲ್ಲಿದ್ದರು. ಆಗ ಬರೆದ ಈ ಕವನಕ್ಕೆ 'ಹುಬ್ಬಳ್ಳಿಯಾಂವಾ' ಎಂದು ಹೆಸರಿಟ್ಟದ್ದು ಪ್ರಥಮ ಆಶ್ಚರ್ಯ. ಈ ಕವನಕ್ಕೆ ಯಾವ ಊರಿನ ಹೆಸರು ಇಟ್ಟರೂ ನಡೆಯುತ್ತಿತ್ತು. ಏಕೆಂದರೆ, ಕವನದ ವಸ್ತು- 'ಪ್ರಣಯ ಭಂಗದಿಂದ ಹುಚ್ಚುಹಿಡಿದ ಸೂಳೆಯೊಬ್ಬಳು ತನ್ನ ಉನ್ಮಾದದಲ್ಲಿ ಹಾಡಿದ ಹಾಡಿದು'. ಸೂಳೆಯರ ಸಮಸ್ಯೆ ಜಾಗತಿಕ ಹಾಗೂ ಸರ್ವಕಾಲದ ಸಮಸ್ಯೆ. ಅಂಥದ್ದನ್ನು ಕುರಿತು ಬೇಂದ್ರೆಯವರು ಬರೆಯಬಹುದಾಗಿದ್ದ ನಾಟಕದಲ್ಲಿನ ಒಂದು ಲಾವಣಿ.

ಈ ಪದ್ಯದಲ್ಲಿ ಎರಡು ಸಾಲಿನ ಒಂದು ಪಲ್ಲವಿ ಮತ್ತು ಆರು ನುಡಿ ಇದ್ದುದರಿಂದ, ಇದು ಹಾಡಲೇಬೇಕಾದ ಗೇಯ (ಗಾಥೆ-ಹಾಡು) ಕವನ. ಇಲ್ಲಿಯ ಧಾರವಾಡದ ಆಡುಭಾಷೆಯ ಸೊಗಸು ಮತ್ತು ಲಯ-ಲಾವಣಿಯಲಯ-ದ ಮೂಲಕ, ಬೇಂದ್ರೆಯವರೇ ಧಾರವಾಡಕ್ಕೆ ಬಂದೊಡನೆ, ಅನೇಕ ಕಡೆಗೆ ಹಾಡಿದ್ದರಿಂದ ಜನಪ್ರಿಯವಾಗಿಬಿಟ್ಟಿತು 1935-36 ರಲ್ಲಿ. ಇದರ ಪರಿಣಾಮವಾಗಿ 'ಸಖೀಗೀತ'ದ 24ನೇ ಕವನವಾಗಿ ಸೇರ್ಪಡೆಗೊಂಡು 1937ರಲ್ಲಿ ಪ್ರಕಟವಾಯಿತು. ಅನೇಕರು ಕಂಠಪಾಠ ಮಾಡಿ ಉತ್ಸಾಹದಿಂದ ಹಾಡತೊಡಗಿದರು. ಇದರೊಳಗಿನ 'ಸೆಟ್ಟರ ಹುಡುಗ' ಎಂಬ ಪದ ಹುಬ್ಬಳ್ಳಿಯ ಹಲವರಿಗೆ ನೋವು ಕೊಟ್ಟಿದ್ದರಿಂದ ಇದು 'ಅಶ್ಲೀಲ ಪದ' ಎಂಬ ಹಣೆಪಟ್ಟಿ ಕಟ್ಟಿ ಈ ಕವನ ಹಾಡುವುದಕ್ಕೆ ಬಹಿಷ್ಕಾರ ಹಾಕಲಾಯಿತು. ಬೇಂದ್ರೆ ಹಾಡುವುದನ್ನು ನಿಲ್ಲಿಸಿಬಿಟ್ಟರು. 'ಹಾಡು ಅಂದರ ಹಾಡಬೇಕು. ಬ್ಯಾಡ ಅಂದರ ಬಿಡಬೇಕು' ಎಂಬುದು ಬೇಂದ್ರೆ ಪಾಲಿಸಿದ ಧರ್ಮ. ಬಹುಬೇಗನೇ ಹುಬ್ಬಳ್ಳಿಯ ಸಿದ್ಧಾರೂಢ ಮಠದಲ್ಲಿ ಒಬ್ಬ ಪೂಜಾರಿ ಆರತಿ ಬೆಳಗುವಾಗ ಈ ಹಾಡು ಹಾಡಿದ್ದರಿಂದ ಬಹಿಷ್ಕಾರದ ಅಸ್ತ್ರವಾಗಿ; ಹಾಡುವುದು ಹೆಚ್ಚಾಗಿ ಬಿಟ್ಟಿತು. ಇದನ್ನು ದೇವಸ್ಥಾನದಲ್ಲಿ, ಮಠಗಳಲ್ಲಿ, ಕುಟುಂಬಸ್ಥರಾದ ತರುಣ ಹುಡುಗಿಯರು ಅಭಿಮಾನದಿಂದ, ಸಾಭಿನಯ ಪೂರ್ಣವಾಗಿ ಹಲವಾರು ಸಲ ಎದೆತುಂಬಿ ಹಾಡಿದ್ದಾರೆ. ಆ ತರುಣಿಯರ ಶೀಲದ ಬಗ್ಗೆ ಯಾರೂ ಗುಜುಗುಜು ಮಾತನಾಡಲಿಲ್ಲ. 'ಸಖೀಗೀತ' ಹಲವಾರು ಸಲ ಪಠ್ಯಪುಸ್ತಕವಾಗಿದೆ. ನಾನೂ ಮೂರು ವರ್ಷ ಕಲಿಸಿರುವೆ. ಈ ಪದ್ಯ ಯಾರಿಗೂ ಅಶ್ಲೀಲ ಅನಿಸಿರಲಿಲ್ಲ. ಧಾರವಾಡದ ವಿದ್ಯಾವರ್ಧಕ ಸಂಘದ ಸಭೆಯಲ್ಲಿ ಡಾ. ಶಾಂತಾ ಇಮ್ರಾಪೂರ ಅವರು 'ಕೆಲವು ಮಹಿಳಾ ಪ್ರಾಧ್ಯಾಪಕಿಯರಿಗೆ ಇದು ಅಶ್ಲೀಲವೆನಿಸುತ್ತಿದೆ. ಇದನ್ನು ನೀವು ಹೇಗೆ ಕಲಿಸುತ್ತೀರಿ, ವಿವರಿಸಿರಿ' ಎಂದರು. ವಿವರಿಸಿದೆ. ಸಭೆಯಲ್ಲಿಯೇ 'ಸಂಶಯ ಪರಿಹಾರವಾಯಿತು. ಅಭಿಮಾನದಿಂದ ಕಲಿಸಬಹುದು' ಎಂದು ಒಪ್ಪಿಕೊಂಡದ್ದು ಈ ಕವನದ ಶ್ರೇಷ್ಠತೆ.



ಸುಮತೀಂದ್ರ ನಾಡಿಗರು 'ಹುಬ್ಬಳ್ಳಿಯಾಂವಾ' ಕುರಿತು ಬರೆದಿದ್ದಕ್ಕೆ ದ.ರಾ.ಬೇಂದ್ರೆಯವರ ಪುತ್ರ ವಾಮನ ಬೇಂದ್ರೆ ಬರೆದ ಪ್ರತಿಕ್ರಿಯೆಯ ಮೊದಲನೆಯ ಭಾಗ ಇಲ್ಲಿದೆ.

1979ರಲ್ಲಿ ಬೇಂದ್ರೆಯವರ ಜ್ಞಾನಪೀಠ ಪ್ರಶಸ್ತಿ ವಿಜೇತ 'ನಾಕುತಂತಿ'ಯ ಮರಾಠಿ ಅನುವಾದವನ್ನು, ಬೆಳಗಾವಿಯ ಮರಾಠಿ ಪ್ರಾಧ್ಯಾಪಕರಾದ ಶ್ರೀ ವಿ.ಎಲ್. ಜೋಶಿಯವರು ಮಾಡಿದರು. ಅವರ ಮಾತೃಭಾಷೆ- ಕನ್ನಡ. ಇವರ ಅನುವಾದವನ್ನು ಮಹಾರಾಷ್ಟ್ರದ ಸಾಹಿತಿಗಳು ಇಂದಿಗೂ ಮೆಚ್ಚುತ್ತಾರೆ. 2005ರಲ್ಲಿ ಬೇಂದ್ರೆಯವರ ಜನಪ್ರಿಯವಾದ 51 ಕವನಗಳನ್ನು ಆಯ್ಕೆಮಾಡಿ ಅದರ ಮರಾಠಿ ಅನುವಾದವನ್ನು ಗೇಯ ಹಾಗೂ ಮುಕ್ತಛಂದದಲ್ಲಿ ಮಾಡಿ, ಜೋಶಿಯವರು 'ಕವಿತಾ ಅಂಬಿಕಾತನಯದ ತ್ಯಾಂಚ್ಯಾ- ಅಂಬಿಕಾತನಯದತ್ತರ ಕಾವ್ಯ' ಎಂಬ ತಲೆಬರಹದೊಂದಿಗೆ ಪ್ರಕಟಪಡಿಸಿದರು. ಅದರಲ್ಲಿಯ 3ನೇ ಕವನ- ಬೆಳಗು. 8ನೇ ಕವನ- ಕಾಲಪಕ್ಷಿ; 10ನೇ ಕವನ- ಹುಬ್ಬಳ್ಳಿಯಾಂವಾ ಮತ್ತು 15ನೇ ಕವನ- ಜೋಗಿ. ಇವುಗಳನ್ನು ಕುರಿತು ಬರೆದ 'ಆತ್ಮನಿವೇದನೆ'ಯಲ್ಲಿ 'ಬೆಳಗು- ಪಹಾಟ; ಹುಬ್ಬಳ್ಳಿಯಾಂವಾ- ಹುಬ್ಬಳ್ಳಿವಾಲಾ; ಜೋಗಿ-ಬೈರಾಗಿ; ಹಕ್ಕಿ ಹಾರುತಿದೆ ನೋಡಿದಿರಾ- ಕಾಲಪಕ್ಷಿ ಇವು ವಿಶ್ವಸಾಹಿತ್ಯದಲ್ಲಿ ಕೀರ್ತಿ ಪಡೆಯಬಲ್ಲ (ನೋಂದು ಆಗಬಲ್ಲ) ಅತ್ಯಂತ ಶ್ರೇಷ್ಠ ಕವನಗಳಾಗಿವೆ' ಎಂದರು. ಇವೂ ಮಹಾರಾಷ್ಟ್ರದಲ್ಲಿ ಜನಪ್ರಿಯವಾಗಿವೆ. ಹೀಗಿದ್ದೂ, 2011ರಲ್ಲಿ ಸುಮತೀಂದ್ರ ನಾಡಿಗ ಅವರಿಗೆ 'ಹುಬ್ಬಳ್ಳಿಯಾಂವಾ' ಕಾಡುವ ಕವಿತೆಯಾದದ್ದು ನನಗೆ ಆಶ್ಚರ್ಯವೆನಿಸಿತು. ಅವರ ಲೇಖನ ಮತ್ತೆ ಓದತೊಡಗಿದೆ.

1989ರ ಪೂರ್ವದಲ್ಲೇ ಡಾಕ್ಟರೇಟ್ ಪದವಿ ಪಡೆಯಲು ಸಂಶೋಧನೆ ಮಾಡುತ್ತಿರುವಾಗ ಅವರಿಗೆ 'ಹುಬ್ಬಳ್ಳಿಯಾಂವಾ' ಕಾಡಿರಲಿಲ್ಲ. ಅವರಿಗೆ ದೊರೆತ ನಾಗಲಿಂಗಜ್ಜನನ್ನು ಕುರಿತ ಹಾಡಿನ ಪಲ್ಲವಿ ಮತ್ತು 'ಹುಬ್ಬಳ್ಳಿಯಾಂವಾ' ಹಾಡಿನ ಪಲ್ಲವಿಯಲ್ಲಿ ಸಾಮ್ಯಕಂಡು, ಸಮಾಧಾನ ತಾಳಿ 'ಬೇಂದ್ರೆಯವರ ಕಾವ್ಯದ ವಿಭಿನ್ನ ನೆಲೆಗಳು' ಸಂಶೋಧನಾ ಪ್ರಬಂಧ ಪೂರ್ಣಗೊಳಿಸಿದ್ದರು. ಎರಡೂ ಕವನಗಳ ಮುಂದಿನ ಭಾಗ ಸಂಪೂರ್ಣ ಭಿನ್ನ! ನಾಡಿಗರು 'ಹುಬ್ಬಳ್ಳಿಯಾಂವಾ' ತತ್ವಪದ ಎಂದಿರಲಿಲ್ಲ. 'ಗಿರಡ್ಡಿಯವರಿಗೆ ಗೋವಿಂದರಾಜರು 'ಹುಬ್ಬಳ್ಳಿಯಾಂವಾ' ಕವಿತೆಯೂ ಒಂದು ತತ್ವಪದ ಎಂದು ಭ್ರಮೆಗೆ ಒಳಗಾಗಿದ್ದಾರೆ' ಎಂಬ ನಿರ್ಣಯದಿಂದ ಬರೆದ ಟಿಪ್ಪಣಿಯೇ ಪ್ರಸ್ತುತಲೇಖ.

ಕವಿತೆ ಮುಗಿದೊಡನೆ ನಾಡಿಗ ಅವರು, ಕವಿತೆಗೆ ಬೇಂದ್ರೆ ಬರೆದ ಭಾವಸಂದರ್ಭದ ತುಣುಕು ಕೊಡುತ್ತಾರೆ. ಇದೊಂದೇ ಸರಿಯಾದ ಮಾರ್ಗ. ಅವರ ಟಿಪ್ಪಣಿಯ ಕ್ರಮ ಹೀಗಿದೆ; (1) 'ಒಬ್ಬ ವೇಶ್ಯೆ ತಾನು ಪ್ರೀತಿಸಿದ ತರುಣ ಬಹಳ ದಿನಗಳಿಂದ ಬಾರದ್ದರಿಂದ, ತನ್ನ ಮತ್ತು ಅವನ ಸಂಬಂಧದ ವಿವರಗಳನ್ನು ಜ್ಞಾಪಿಸಿಕೊಂಡು, ಅವನಿಗಾಗಿ ಹಲಬುತ್ತ, ಆರ್ತಳಾಗಿ, ಅವನೆಲ್ಲಿದ್ದಾನೆ ಎಂದು ತನ್ನ ಗೆಳತಿಯರಿಗೆಲ್ಲ ಕೇಳುತ್ತ ಹಾದಿಬೀದಿಯಲ್ಲೆಲ್ಲ ತಿರುಗುತ್ತಾಳೆ'. ಇಷ್ಟು ವಾಕ್ಯಗಳಲ್ಲಿ 'ಹುಬ್ಬಳ್ಳಿಯಾಂವಾ' ಕವನದ ಪಲ್ಲವಿಯಿಂದ ಆರೂ ನುಡಿಗಳ ಸಾರಾಂಶ ಬಂದುಹೋಗಿದೆ. ಬೇಂದ್ರೆಯವರ ಕವನ ಮುದ್ರಿಸುವ ಅವಶ್ಯಕತೆಯೇ ಇರಲಿಲ್ಲ. ಈ ಪದ- ಹಾಡು ಎಲ್ಲ ಸಹೃದಯ ರಸಿಕ ಭಕ್ತರಿಗೆ ಕಂಠಪಾಠವಿದೆ! (2) 'ವೇಶ್ಯೆಯೊಬ್ಬಳೇ ಇಲ್ಲಿ ಮಾತನಾಡುವವಳು. ಅವಳ ಪ್ರಿಯಕರನ ರೂಪ, ರಸಿಕತೆ, ಅವನ ಮೋಹಕತೆ ಮತ್ತು ಅವನ ಆತ್ಮೀಯ ಸಂಬಂಧ ನಮ್ಮಲ್ಲಿ ಭಾವನಾತ್ಮಕ ಪರಿಣಾಮ ಬೀರುತ್ತದೆ.' 1ನೇ ನುಡಿಯ ಭಾವಾನುವಾದವಿದು. (1) ಭಾರಿ ಜರದವಾರಿ ರುಮಾಲು, ತುಂಬುಮೀಸಿ, ಹುಬ್ಬು, ಮಾತುಮಾತಿಗೆ ನಕ್ಕುನಗಿಸಿ ಆಡಿಸ್ಯಾಡಾವಾ... ಏನೋ ಅಂದರ ಏನೋ ಕಟ್ಟಿ ಸುತ್ತಿಕೊಳ್ಳುವ, ತೀಡುವ, ಹಾರಿಸುವ, ಆಡಿಸ್ಯಾಡಾಂವಾ ಹಾಗೂ ಹಾಡಹಾಡಾಂವಾ ಎಂಬ ಕ್ರಿಯೆಯಲ್ಲಿ ನಾಯಕ ತೊಡಗುತ್ತಾನೆ' ಎಂಬುದು ನುಡಿ-1ರ ಅನ್ವಯಾನುವಾದ. ಇಲ್ಲಿ ಒಬ್ಬಳೇ ಮಾತನಾಡುವುದಿಲ್ಲ. ಕವಿ, ಕಥೆ, ಕಾದಂಬರಿ, ಹರಟೆ, ಪ್ರಬಂಧಗಳಲ್ಲಿ ಒಬ್ಬರೇ ಮಾತನಾಡುವದಿಲ್ಲ. ಲೇಖಕನ ಪ್ರತಿಭೆ ಮತ್ತು ನಾಯಕ, ನಾಯಕಿಯರೊಂದಿಗೆ ನಡೆದ ಸಂವಾದವೇ ಕೃತಿ. ಅಂಬಿಕಾತನಯದತ್ತ ಮತ್ತು ಶ್ರಾವಣ ಪ್ರತಿಭೆಯುಳ್ಳ ದ.ರಾ. ಬೇಂದ್ರೆ ಇವರಲ್ಲಿ ನಡೆದ ಸಂವಾದವೇ- 'ಹುಬ್ಬಳ್ಳಿಯಂವಾ'- ಇದು ನಾಟಕದೊಳಗಿನ ಒಂದು ಹಾಡು ಮಾತ್ರ. ನಾಟ್ಯಗಳಲ್ಲಂತೂ ಅನೇಕ ಪಾತ್ರಗಳ ಸಂವಾದವೇ ಇರುತ್ತದೆ. ಇಲ್ಲಿಯ ನಾಯಕಿ ವೇಶ್ಯೆಯಲ್ಲ; ಸೂಳೆ. 'ಸೂಳೆ' ಎಂಬ ಪದವನ್ನು ಬೇಂದ್ರೆಯವರು ಅವರ 1925ರ ಸಾಯೋಆಟದಲ್ಲಿ ಮೊದಲು ಬಳಸಿದ್ದರು. ಅನಂತರದಲ್ಲಿ 1935ರ ಈ ಕವನದಲ್ಲೇ ಬಳಸಿದ್ದಾರೆ. ಈ ಶಬ್ದದ ಬಳಕೆ ಅನೇಕ ನಟರಿಗೆ ಉಚ್ಚರಿಸಲೂ ಅಸಾಧ್ಯವಾಯ್ತಂತೆ. ಅಷ್ಟು "ಅಶ್ಲೀಲ" ಎಂದರು ನಟರು. 'ಶಬ್ದ ಬಳಸಬಾರದು ಸರಿ. ಅಶ್ಲೀಲ ಕ್ರಿಯೆಯಲ್ಲಿ ತೊಡಗಬಹುದು ತಾನೇ?' ಎಂದು ಬೇಂದ್ರೆ ಪ್ರಶ್ನೆ ಕೇಳಿದರು. ಯಾರೂ ಇಂದಿನವರೆಗೆ ಉತ್ತರಿಸಿಲ್ಲ. (1) ಸಾಯೋಆಟದ ಸೂಳೆ- ಪ್ರೀತಿಯ ಗಂಡನನ್ನು ಕಳೆದುಕೊಂಡು ದುಃಖಪಡುವ ವಿಧವೆ. ಈ ಕವನದ ಸೂಳೆ ಪ್ರಣಯಭಂಗದ ಉನ್ಮಾದದಿಂದ ಹುಚ್ಚಳಾದ ಸ್ತ್ರೀ ಇವಳ ದುಃಖ ಅರ್ಥಮಾಡಿಕೊಳ್ಳದಿರುವುದೇ ಸ್ತ್ರೀ ಶೋಷಣೆ. ಬೇಂದ್ರೆಯವರು ಇಲ್ಲಿ ಹಳೆಗನ್ನಡ "ಸೂಳೆ" ಬಳಸಿದ್ದು. "ಸೂಳೆ" ಶೂಲೆಯ ತದ್ಭವ. ವೇಶ್ಯೆಯಿಂದ ಪ್ರಾರಂಭಿಸಿ ಹನ್ನೆರಡು ಸಮಾನ ಪದಕೊಟ್ಟು 'ಸೂಳೆಗೆ ಕೊಟ್ಟ ಹಣ; ಸುಡುಗಾಡಿಗೆ ಹೋದ ಹೆಣ' ಮತ್ತು 'ಸೂಳೆ ಮುಪ್ಪಾಗಿ ಜೋಗತಿ ಆದಳು' ಮತ್ತು ಸೂಳೇಮಗ, ಸುಬೇದಾರ, ಹಾದರಗಿತ್ತಿ, ಹವಾಲ್ದಾರ ಮೊದಲಾದ ಪ್ರಯೋಗ ಕೊಡುತ್ತಾರೆ ಕಿಟೆಲ್, ಇವು ಯಾವವೂ ಬೇಂದ್ರೆಯವರ ಕವನಕ್ಕೆ ಅನ್ವಯಿಸುವುದಿಲ್ಲ. ಇಲ್ಲಿಯ ನಾಯಕಿ- ಕಸಬೇರು, ಬಸವೇರು, ದೇವದಾಸಿ ಹಾಗೂ ಜೋಗತಿಯಲ್ಲ. ಇವಳು ಶ್ರೀಮಂತ ಮತ್ತು ಗುಣಸಂಪನ್ನೆ. ಕಾಮುಕಿಯಲ್ಲ. ಚಾರಿತ್ರ್ಯಹೀನಳಲ್ಲ. ನಾಯಕನೂ ಅಷ್ಟೇ ಸಂಪನ್ನ! ಇಂಥವನು ನಾಯಕಿಯತ್ತ ಆಕರ್ಷಿತನಾಗಿ, ಕಬ್ಬಿಣದ ತುಂಡಾಗಿ; ಚುಂಬಕತ್ವ ಶಕ್ತಿಯ 'ವಾರಿನೋಟ' ಬೀರಿದವಳತ್ತ ಬಂದದ್ದು. ಬೇಂದ್ರೆಯವರು ಬಳಸಿದ ಹಳೆಗನ್ನಡದ "ಸೂಳೆ" ಈ ಅರ್ಥವಂತಿಕೆಯದು. ನಾಯಕನ ಭೆಟ್ಟಿಯಿಂದ ನಾಯಕಿ ಹುಚ್ಚಳಾಗಲು ಇಬ್ಬರಲ್ಲಿಯ ಮೌಲಿಕ ಚಾರಿತ್ರ್ಯವೇ ಕಾರಣ. ಇದೇ ಈ ಪದದ-ಹಾಡಿನ ಪಲ್ಲವಿ. ಹಿಂದೂಸ್ತಾನಿ ಸಂಗೀತದ- ಸ್ಥಾಯಿ! ■